ಬಂದಾಗ ಅವನು ಗಾಢ ನಿದ್ರೆಯಲ್ಲಿರುವುದು. ಅವಳು ಅವನನ್ನು ಎಬ್ಬಿಸಲು ಪ್ರಯತ್ನಿಸಿ ವಿಫಲವಾಗುವುದು. ಕೊನೆಗೆ ತೊಟ್ಟ ಮುತ್ತಿನಹಾರವನ್ನು ಗೋಡೆಯ ಗೂಟಕ್ಕೆ ತಗುಲಿಸಿ ತಾನೂ ಮಲಗುವುದು. ಶನಿಯು ಗೋಡೆಯ ಮೇಲೆ ಚಿತ್ರಿಸಿರುವ ಹಂಸದೊಳಗೆ ಸೇರಿಕೊಳ್ಳುವುದು. ಹಾಗೂ ಆ ಚಿತ್ರದ ಹಂಸವು ಜೀವ ಪಡೆದು ಹಾರಿ ಗೂಟಕ್ಕೆ ಹಾಕಿರುವ ಮುತ್ತಿನಹಾರವನ್ನು ನುಂಗಿ ಮತ್ತೆ ಗೋಡೆಯ ಮೇಲೆ ಚಿತ್ರವಾಗುವುದು. ಇದೆಲ್ಲವನ್ನೂ ವಿಕ್ರಮರಾಜ ನೋಡುವುದು – ಎಲ್ಲವೂ ಗಂಗಿರೆಡ್ಡಿಯ ಮನಸ್ಸಿನ ಪರದೆಯ ಮೇಲೆ ಚಿತ್ರಾವಳಿಯಂತೆ ಚಲಿಸತೊಡಗಿದವು. ಅದಾದ ಮೇಲೆ ಅಲ್ಲವೇ ಅಲೋಲಿಕೆ ಮತ್ತು ನಂದಿಶೆಟ್ಟ ಅವನ ಮೇಲೆ ಕಳ್ಳತನದ ಆರೋಪ ಹೊರಿಸಿ ಚಂದ್ರಶಯನ ರಾಜನ ಬಳಿಗೆ ಕರೆದುಕೊಂಡು ಹೋಗುವುದು. ಅಲ್ಲಿ ವಿಕ್ರಮರಾಜನು ನಡೆದ ಸತ್ಯಸಂಗತಿಯನ್ನು ಹೇಳಿದರೆ ಯಾರೂ ನಂಬದಿರುವುದು ಮತ್ತು ಚಂದ್ರಶಯನನು ವಿಕ್ರಮರಾಜನ ಕೈಕಾಲುಗಳನ್ನು ಕಡಿಸುವುದು.

ಯಾಕೋ ಗಂಗಿರೆಡ್ಡಿಗೆ ವಿಕ್ರಮರಾಜನ ಬದುಕಿನಲ್ಲಿ ನಡೆದದ್ದೆಲ್ಲವೂ ತನ್ನ ಬದುಕಿನಲ್ಲೂ ನಡೆಯುತ್ತಿವೆ ಎಂದನಿಸತೊಡಗಿತು. ಶಿವಾರೆಡ್ಡಿ ಹೇಳಿದ ಹಾಗೆ ಶನಿ ತನ್ನ ತಲೆಯ ಮೇಲೆ ಕುಳಿತಿರುವನೆ ಎಂಬ ಅನುಮಾನವೂ ಕಾಡತೊಡಗಿತು. ಎರಡು ಹೆಜ್ಜೆ ಇಟ್ಟು ಅಣ್ಣನ ಮುಂದೆ ನಿಂತುಕೊಂಡು,

ಚಂದ್ರಶಯನ ರಾಜಾ ಕೇಳೂ
ಮುತ್ತಿನಹಾರವು ನನ್ನಲಿಲ್ಲ
ಕೇಳಿ ನೀವಿನ್ನೂ...
ಓ ಚಂದ್ರಶಯನಾ
ದಂಡವ್ಯಾಕೆ ಕೊಡುತಿ ನೀನೆಂದ
ಸುಳ್ಳುಯಂದಿಗೂ ಆಡಲಾರೆ... ಕೇಳು ರಾಜಾ...

ಎಂದು ಕಣ್ಣಂಚಿಗೆ ನೀರು ತಂದುಕೊಂಡು ಹಾಡತೊಡಗಿದ.

ದೇವರೆಡ್ಡಿ 'ಆ ಹಾಳಾದ ಪದಗಳ್ನ ನನ ಮುಂದ್ಕೆ ಯೇಳ್ಬೇಡ ನೀನು. ನೀ ಹಾಡಿ ಹಾಡಿ ನಂಕೆ ಶನಿ ವಕ್ಕರಿಸ್ಕೋತಿದೆ. ಯಾವುದ್ರಾಗೂ ಒಂದು ನಯಾ ಪೈಸಾ ಗಿಟ್ಟಲ್ಲ. ನೀನ್ ನೋಡಿದ್ರೆ ಮೂರೊತ್ತೂ ಆ ದರಿದ್ರ ಪದಗಳ್ನ ಹಾಡ್ಕಂಡು ತಿರುಗ್ತಿರ್‍ತಿಯ. ಇವಾಗ್ ನೋಡಿದ್ರೆ ಅವ್ರುಳ ಸರ...' ಎಂದು ನುಡಿದು ಬುಸುಗುಟ್ಟತೊಡಗಿದ.

ಅಣ್ಣ ತಾನೇ ಕದ್ದಿರುವುದು ಎಂಬ ತೀರ್ಮಾನಕ್ಕೆ ಬಂದಿರುವ ಹಾಗಿದೆ ಎಂದನಿಸಿ ಗಂಗಿರೆಡ್ಡಿ 'ಕಾಪಾಡು ಸ್ವಾಮಿ' ಎಂದುಕೊಳ್ಳುತ್ತಾ ಪಕ್ಕದಲ್ಲೆ ಇರುವ ದಿವಾನದ ಮೇಲೆ ಕುಳಿತುಕೊಂಡ. ದೂರದಲ್ಲಿ ಮಿಂಚು ಸಂಭವಿಸಿ ಆಕಾಶವೆಲ್ಲಾ ಬೆಳಗಿದ ಹಾಗಾಯಿತು. ಒಮ್ಮೆ ಆಚೆ ಇಣುಕಿದ. ಮತ್ತೆ ಕತ್ತಲು. ಜೊತೆಗೆ ಗುಡುಗಿನ ಸದ್ದು. ಒಂದು ಕ್ಷಣ ಮಾತ್ರ ಇಡೀ ಜಗತ್ತನ್ನೆ ಬೆಳಗಿಸಿ ಮಾಯವಾಗುವ ಮಿಂಚು! ಆ ಕ್ಷಣದ ಬೆಳಕಿನಲ್ಲೆ ಎಲ್ಲ ಸತ್ಯಗಳನ್ನೂ ಕಂಡುಕೊಳ್ಳಬೇಕಾದ ತುರ್ತು. ಅವನಿಗೆ ತಾನು ಅಪರಿಚಿತನಂತೆಯೂ ಆಪಾದಿತನಂತೆಯೂ ಅನಿಸತೊಡಗಿತು. ಹಾಗೆ ಅದೇ ಭಾವದಲ್ಲಿ ಕುಳಿತು 'ಯಾವ ರಾಜ್ಯವು ನಿಮ್ಮದು ಯಾವ ದೇಶವಯ್ಯಾ? ಯಾವ ಕುಲವು ಹೇಳೀ ನಾಮವೇನೆಂದೂ...' ಎಂದು ಗಟ್ಟಿಯಾಗಿ ಹಾಡತೊಡಗಿದ. ಅದೇ ಸಾಲುಗಳನ್ನು ಮತ್ತೆ ಮತ್ತೆ ಪುನರಾವರ್ತಿಸಿ ಹಾಡಿದ. ಕೊನೆಗೆ 'ಓ ವಿಕ್ರಮರಾಜಾ...' ಎಂದು ಏರುದನಿಯಲ್ಲಿ ರಾಗವೆಳೆದ. ದೇವರೆಡ್ಡಿ 'ಏಯ್... ಆ ದರಿದ್ರ ಪದಗಳ್ನ ಇನ್ನೊಂದಪ ಈ ಮನೆನಾಗೆ ಯೇಳಿದ್ರ್ಯೋ...' ಎಂದು ಗದರಿ ಕಡೆಯ ಎಚ್ಚರಿಕೆ ಎಂಬಂತೆ ಬೆರಳು ತೋರಿಸಿದ. ಗಂಗಿರೆಡ್ಡಿಗೆ ದುಃಖ ಉಮ್ಮಳಿಸಿ ಬಂದಹಾಗಾಯಿತು. ಎದ್ದವನೆ ಆಚೆ ನಡೆದುಬಿಟ್ಟ.

ಅವನು ಹತ್ತುಗಂಟೆಯವರೆಗೂ ಊರ ದೇವಸ್ಥಾನದ ಮುಂದೆ ಕುಳಿತಿದ್ದ. ಮನೆಗೆ ಹೋಗಲು ಯಾಕೋ ಮನಸ್ಸು ಹಿಂದೇಟು ಹಾಕುತ್ತಿತ್ತು. ತನ್ನ ಕೈಕಾಲುಗಳನ್ನು ಕತ್ತರಿಸಿ ಯಾರೋ ಇಲ್ಲಿ ತಂದು ಹಾಕಿದ್ದಾರೆ ಎಂದನಿಸಿ ಒಮ್ಮೆ ಕೈಕಾಲುಗಳನ್ನು ನೋಡಿಕೊಂಡ. ಜೀವವೇ ಇಲ್ಲದಂತೆ ನೇತಾಡುತ್ತಿವೆ ಎಂದನಿಸಿತು. 'ಕ್ರೂರರಾದಾಚರರು ದಯದಾಕ್ಷಿಣ್ಯವಿಲ್ಲದೇ ವಿಕ್ರಮನೆಳೆದೊಯ್ದು ಊರು ಆಚೆಗೇ... ಕಡಿದರು ಕೈಕಾಲುಗಳ ಸಡಗರದಿಂ ತಾವೂ ಮೂಢರು ಅವರೆಲ್ಲಾ ಘಾಸಿಕೊಟ್ಟರೂ...' ಎಂದು ಸಂಕುಚಿತಗೊಂಡು ಹಾಡುತ್ತಾ ಕುಳಿತುಬಿಟ್ಟ. ಬಹಳ ಹೊತ್ತು ಹಾಗೆ ಹಾಡುತ್ತಲಿದ್ದವನಿಗೆ ಯಾಕೋ ತೂಕಡಿಕೆ ಬಂದಂತಾಗಿ ವಾಲಿದ. ಕೆಳಗೆ ಪ್ರಪಾತಕ್ಕೆ ಬಿದ್ದುಬಿಟ್ಟೆನೇನೋ ಎಂದನಿಸಿ ಬೆಚ್ಚಿದ. ಇದೇನು ಪ್ರಭಾವವೋ